ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ:ಸಂಶಿನಿ: ಪ್ರ.ಪ/2022–23 ದಿನಾಂಕ: 30.12.2022

## ಅಧಿಸೂಚನೆ

**ವಿಷಯ: 2022–23ನೇ ಸಾಲಿನ ಸಂಸ್ಕೃತ, ವೇದ ಹಾಗೂ ಜೈನ ತರಗತಿಗಳ ಪ್ರಸಿದ್ಧ ಪರೀಕ್ಷೆಗಳ ಪರೀಕ್ಷಾ ಶುಲ್ಕವನ್ನು ಪಾವತಿಸುವ ಅಂತಿಮ ದಿನಾಂಕವನ್ನು ವಿಸ್ತರಿಸುವ ಬಗೆಗೆ.**

ಉಲ್ಲೇಖ: 1. ಅಧಿಸೂಚನೆ ಸಂಖ್ಯೆ: ಕಸಂವಿ:ಸಂಶಿನಿ: ಪ್ರ.ಪ/2022–23; ದಿನಾಂಕ: 02.12.2022.

2. ಮಾನ್ಯ ಕುಲಪತಿಗಳ ಅನುಮೋದನೆ; ಕಂಡಿಕೆ ಸಂಖ್ಯೆ: 19; ದಿನಾಂಕ: 28.12.2022.

2022–23ನೇ ಸಾಲಿನ ಸಂಸ್ಕೃತ, ವೇದ ಹಾಗೂ ಜೈನ ತರಗತಿಗಳ ಪ್ರಸಿದ್ಧ ಪರೀಕ್ಷೆಗಳಿಗೆ ಉಲ್ಲೇಖ 1ರ ಅಧಿಸೂಚನೆ ಅನ್ವಯ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು ಹಾಗೂ ವಿದ್ಯಾರ್ಥಿಗಳು ಶುಲ್ಕ ಮತ್ತು ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು 10.12.2022ಕ್ಕೆ ನಿಗದಿಗೊಳಿಸಲಾಗಿತ್ತು. ತಾಂತ್ರಿಕ ಸಮಸ್ಯೆಗಳ ಕಾರಣದಿಂದಾಗಿ ಕೆಲವು ಸಂಸ್ಕೃತ ಪಾಠಶಾಲೆಗಳು ನಿಗದಿತ ಅವಧಿಯೊಳಗೆ ಶುಲ್ಕವನ್ನು ಪಾವತಿಸಿರುವುದಿಲ್ಲ. ಅಲ್ಲದೇ, 2020–21ನೇ ಸಾಲಿನಿಂದ ನೂತನವಾಗಿ ಪ್ರಾರಂಭವಾಗಿರುವ ಸಂಸ್ಕೃತ ಪಾಠಶಾಲೆಗಳು ಹೊಸದಾಗಿ ಮಾನ್ಯತೆ ಪಡೆದುಕೊಂಡಿರುತ್ತವೆ. ಈ ಪಾಠಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಪ್ರಸಿದ್ಧ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಬೇಕಿರುತ್ತದೆ. ಈ ಹಿನ್ನೆಲೆಯಲ್ಲಿ, ಉಲ್ಲೇಖ 2ರ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಪ್ರಸಿದ್ಧ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಪಾವತಿಸುವ ಅಂತಿಮ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

| **ವಿದ್ಯಾರ್ಥಿಗಳು ಶುಲ್ಕ ಮತ್ತು ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ** | **ಆನ್‌ಲೈನ್ ಮುಖಾಂತರ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ** | **ಆನ್‌ಲೈನ್‌ನಲ್ಲಿ ಶುಲ್ಕವನ್ನು ಪಾವತಿಸಿದ ರಸೀದಿಯೊಂದಿಗೆ ಅರ್ಜಿಗಳನ್ನು & ನಾಮಾಂಕಿತ ಪಟ್ಟಿಗಳನ್ನು ನಿರ್ದೇಶನಾಲಯಕ್ಕೆ ತಲುಪಿಸುವ ಅಂತಿಮ ದಿನಾಂಕ** |
|---|---|---|
| **05.01.2023** | **06.01.2023** | **09.01.2023** |

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಥವಾ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಿಂದ ಅಧಿಕೃತವಾಗಿ ಮಾನ್ಯತೆ ಪಡೆದ ಪಾಠಶಾಲೆಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. **(ಶಾಲಾ ಮಾನ್ಯತೆ/ಮಾನ್ಯತೆ ನವೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು. ಸಲ್ಲಿಸದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು)**
2. ಪರೀಕ್ಷಾ ಶುಲ್ಕವನ್ನು **'SBI COLLECT LINK'**ನ ಈ ಕೆಳಗಿನ ಲಿಂಕ್ ಮೂಲಕ https://www.onlinesbi.com/sbicollect/icollecthome.htm?corpID=2933157 (PATHASHALA EXAM FEES) ಇದರಲ್ಲಿ ಪಾವತಿಸಿ, ಶುಲ್ಕ ಪಾವತಿಸಿದ ರಸೀದಿಯ ಪ್ರತಿಯನ್ನು ಅರ್ಜಿಯ ಜೊತೆಯಲ್ಲಿ ಕಡ್ಡಾಯವಾಗಿ ಲಗತ್ತಿಸಿ, ಅರ್ಜಿಗಳನ್ನು ಅಂತಿಮ ದಿನಾಂಕದೊಳಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ರಸೀದಿಯನ್ನು ಲಗತ್ತಿಸದೇ ಇರುವ ಹಾಗೂ ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. ವಿದ್ಯಾರ್ಥಿಗಳ ನಾಮಾಂಕಿತ ಪಟ್ಟಿಯಲ್ಲಿ ಪಾಠಶಾಲೆಯ ಹೆಸರು, ಪೂರ್ಣ ವಿಳಾಸ, ಶಾಲಾ ಸಂಕೇತ, ಪರೀಕ್ಷಾ ಕೇಂದ್ರದ ಹೆಸರು, ಪೂರ್ಣ ವಿಳಾಸ, ಕೇಂದ್ರ ಸಂಕೇತ ಸಂಖ್ಯೆ ಮತ್ತು ಪಿನ್‌ಕೋಡ್ ಇವುಗಳನ್ನು ಸರಿಯಾಗಿ ನಮೂದಿಸುವುದು. ನಾಮಾಂಕಿತ ಪಟ್ಟಿಯನ್ನು Microsoft Excel ತಂತ್ರಾಂಶದಲ್ಲಿಯೇ ಸಿದ್ಧಪಡಿಸಿ ಕಳುಹಿಸಬೇಕು. PDF ಅಥವಾ ಬೇರೆ ತಂತ್ರಾಂಶದಲ್ಲಿ ಕಳುಹಿಸಿದ ನಾಮಾಂಕಿತ ಪಟ್ಟಿಯನ್ನು ಸ್ವೀಕರಿಸುವುದಿಲ್ಲ.

4. ಸಂಸ್ಕೃತ ಸಾಹಿತ್ಯ ಹಾಗೂ ವೇದ ಮೂಲ ವಿದ್ಯಾರ್ಥಿಗಳ ನಾಮಾಂಕಿತ ಪಟ್ಟಿಯನ್ನು ಆಂಗ್ಲಭಾಷೆಯಲ್ಲಿ (Font Name- Cambria; Font Size-12) ಕಳುಹಿಸುವುದು ಕಡ್ಡಾಯ.
5. ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ವೇದ ಪ್ರಥಮಾ, ಪ್ರವೇಶ ಪರೀಕ್ಷೆಗಳ ವಿದ್ಯಾರ್ಥಿಗಳ ನಾಮಾಂಕಿತ ಪಟ್ಟಿಗಳನ್ನು ಕನ್ನಡದಲ್ಲಿ (Font Name- Nudi-01e(ಓಣಜು01ಜ); Font Size-12) ಸಿದ್ಧಪಡಿಸಿ ಸಾಫ್ಟ್ ಕಾಪಿಯನ್ನು examdse@gmail.com ಇ–ಮೇಲ್ ವಿಳಾಸಕ್ಕೆ ನಿಗದಿತ ಸಮಯದೊಳಗೆ ಕಳುಹಿಸುವುದು ಹಾಗೂ Hard Copyಯನ್ನು 'ನಿರ್ದೇಶಕರು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018' ಈ ವಿಳಾಸಕ್ಕೆ ಕಳುಹಿಸುವುದು.

   **ವಿ.ಸೂ.: ಮೇಲ್ಕಂಡ ಸೂಚನೆಯಂತೆ ನಾಮಾಂಕಿತ ಪಟ್ಟಿಯನ್ನು ನಿಗದಿತ ಸಮಯಕ್ಕೆ ಸಲ್ಲಿಸದೇ ಇದ್ದಲ್ಲಿ ಮುಂದಿನ ಆಗು ಹೋಗುಗಳಿಗೆ ಶಾಲೆಯ ಮುಖ್ಯೋಪಾಧ್ಯಾಯರೇ ಜವಾಬ್ದಾರರಾಗಿರುತ್ತಾರೆ.**
6. ಸಂಸ್ಕೃತ ಸಾಹಿತ್ಯ, ವೇದ ಮೂಲ ಮತ್ತು ಜೈನಪ್ರಯೋಗ ಪ್ರವೀಣ ತರಗತಿಗಳಿಗೆ ಆವೇದನಾ ಪತ್ರಗಳಿದ್ದು, ಆವೇದನಾ ಪತ್ರಗಳಿಗೆ ಅಭ್ಯರ್ಥಿಗಳ ಭಾವಚಿತ್ರಸಹಿತ ದೃಢೀಕರಿಸಿ ನಾಮಾಂಕಿತ ಪಟ್ಟಿಯೊಂದಿಗೆ ಸಲ್ಲಿಸುವುದು. ಅರ್ಜಿ ನಮೂನೆ ಹಾಗೂ ಅನುಬಂಧಗಳನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.
7. ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ವೇದ ಪ್ರಥಮಾ, ಪ್ರವೇಶ ಹಾಗೂ ಜೈನ ಪ್ರಯೋಗ ಪ್ರಥಮಾ, ಪ್ರವೇಶಿಕಾ ತರಗತಿಗಳಿಗೆ ಆವೇದನಾ ಪತ್ರಗಳಿರುವುದಿಲ್ಲ.
8. ಸಂಸ್ಕೃತ ಕಾವ್ಯ/ಸಾಹಿತ್ಯ, ವೇದ ಪ್ರವೇಶ/ಮೂಲ ಪರೀಕ್ಷೆಯಲ್ಲಿ ಹಾಜರಾಗುವ ಪರೀಕ್ಷಾ ಅಭ್ಯರ್ಥಿಗಳ ಯೋಗ್ಯತಾ ಪ್ರಮಾಣಪತ್ರವನ್ನು ನಾಮಾಂಕಿತ ಪಟ್ಟಿ ಮತ್ತು ಅರ್ಜಿಯ ಜೊತೆ ಲಗತ್ತಿಸಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ಎಲ್ಲಾ ತರಗತಿಗಳ ನಾಮಾಂಕಿತ ಪಟ್ಟಿಗಳನ್ನು ತರಗತಿವಾರು, ಪ್ರತ್ಯೇಕವಾಗಿ ಸಲ್ಲಿಸುವುದು. ಅನುಬಂಧ–1ರ ಮಾದರಿಯಲ್ಲಿಯೇ **ಐಚ್ಛಿಕ ವಿಷಯ ಮತ್ತು ವಿನಾಯಿತಿ ಇರುವ ವಿಷಯಗಳನ್ನು ಸ್ಪಷ್ಟವಾಗಿ ನಮೂದಿಸುವುದು.** ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ ತರಗತಿಗಳಿಗೆ ಸಂಬಂಧಿಸಿದ ಅನುಬಂಧ–1ರ ಮಾಹಿತಿಯನ್ನು ಪ್ರತ್ಯೇಕವಾಗಿ ತಯಾರಿಸಿ ಮೇಲೆ ಹೇಳಿದ ರೀತಿಯಲ್ಲಿ ಸಲ್ಲಿಸಬೇಕು. ಅನುಬಂಧ–2ರಲ್ಲಿ ಶುಲ್ಕದ ವಿವರ ಹಾಗೂ ಶುಲ್ಕ ವಿನಾಯಿತಿಗೆ ಕಾರಣ ಮತ್ತು ಜಾತಿವಾರು ವಿದ್ಯಾರ್ಥಿಗಳ ಸಂಖ್ಯೆ, **ವಿನಾಯಿತಿ ಪಡೆಯಲಿಚ್ಛಿಸುವ ವಿಷಯಗಳಿಗೆ ನಾಮಾಂಕಿತ ಪಟ್ಟಿಯಲ್ಲಿ EX ಎಂದು ನಮೂದಿಸುವುದು. ಪುನರಾವರ್ತಿತ ಅಭ್ಯರ್ಥಿಗಳಿಗೆ ಈ ಹಿಂದೆ ನೀಡಿದ ನೋಂದಣಿ ಸಂಖ್ಯೆಗಳನ್ನೇ ನಾಮಾಂಕಿತ ಪಟ್ಟಿಯಲ್ಲಿ ನಮೂದಿಸತಕ್ಕದ್ದು.** ಅನುಕೂಲವಾಗುವಂತೆ ಸಾಹಿತ್ಯ ಅರ್ಜಿ, ಅನುಬಂಧ 1 ಮತ್ತು 2ರ ಸಾಫ್ಟ್ ಕಾಪಿಯನ್ನು ಜಾಲತಾಣದಲ್ಲಿ ಪ್ರಕಟಿಸಲಾಗಿದೆ.
10. **ಸಂಸ್ಕೃತ ಕಾವ್ಯ, ವೇದ ಪ್ರವೇಶ, ಜೈನಪ್ರಯೋಗ ಪ್ರವೇಶಿಕಾ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ತರಗತಿಯ ಭಾಷಾ ವಿಷಯಗಳು ಮತ್ತು ಸಂಸ್ಕೃತ ಸಾಹಿತ್ಯ, ವೇದ ಮೂಲ ಹಾಗೂ ಜೈನಪ್ರಯೋಗ ಪ್ರವೀಣ ತರಗತಿಗಳ ವಿದ್ಯಾರ್ಥಿಗಳಿಗೆ ಪಿ.ಯು.ಸಿ. ಭಾಷಾ ವಿಷಯಗಳು ಕಡ್ಡಾಯವಾಗಿದ್ದು, 1ನೇ ಪತ್ರಿಕೆ ಸಂಸ್ಕೃತ/ಕನ್ನಡ, 2ನೇ ಪತ್ರಿಕೆ ಇಂಗ್ಲೀಷ್/ಹಿಂದಿ –ಈ ವಿಷಯದಲ್ಲಿ ಪರೀಕ್ಷೆ ಬರೆಯುವುದು ಕಡ್ಡಾಯವಾಗಿರುತ್ತದೆ.**
11. ಕಾವ್ಯ ಮತ್ತು ಸಾಹಿತ್ಯಕ್ಕೆ ಸಮವಾಗಿ ಭಾಷಾ ಪತ್ರಿಕೆಗಳನ್ನು ವೇದ ಪ್ರವೇಶ ಮತ್ತು ವೇದ ಮೂಲ ವಿದ್ಯಾರ್ಥಿಗಳಿಗೆ ಬರೆಯಲು ಸೂಚಿಸಿದೆ.
12. ಭಾಷಾ ಪತ್ರಿಕೆ ಬರೆಯುವ ವಿದ್ಯಾರ್ಥಿಗಳು ಯಾವ ಭಾಷಾ ಪತ್ರಿಕೆಯನ್ನು (**ಸಂಸ್ಕೃತ-SAN, ಕನ್ನಡ–KAN, ಇಂಗ್ಲೀಷ್–ENG, ಹಿಂದಿ–HIN**) ಬರೆಯುತ್ತಾರೆ ಎಂಬುದನ್ನು ತಿಳಿಸಬೇಕು ಮತ್ತು ನಾಮಾಂಕಿತ ಪಟ್ಟಿಯಲ್ಲಿ ಅದನ್ನು ತಪ್ಪದೇ ನಮೂದಿಸಿ ಸಲ್ಲಿಸುವುದು.
13. ಭಾಷಾ ಪತ್ರಿಕೆಗಳಿಂದ ವಿನಾಯ್ತಿ ಪಡೆಯಬೇಕಾದರೆ ಕಾವ್ಯ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಹಾಗೂ ಸಾಹಿತ್ಯ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪಿ.ಯು.ಸಿ. ಅಂಕಪಟ್ಟಿಗಳ

ಜೆರಾಕ್ಸ್ ಪ್ರತಿಗಳನ್ನು ಶಾಲಾ ಮುಖ್ಯೋಪಾಧ್ಯಾಯರು ದೃಢೀಕರಿಸಿ ಸಲ್ಲಿಸುವುದು ಮತ್ತು ನಾಮಾಂಕಿತ ಪಟ್ಟಿಯಲ್ಲಿ ಭಾಷಾಪತ್ರಿಕೆಗಳ ಅಂಕಣದಲ್ಲಿ **EX** ಎಂದು ತಪ್ಪದೇ ನಮೂದಿಸಿ ಸಲ್ಲಿಸುವುದು. **EX** ಎಂದು ನಮೂದಿಸದಿರುವ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಲಾಗುವುದಿಲ್ಲ.

14. ಸಂಸ್ಕೃತ ಕಾವ್ಯ, ವೇದ ಪ್ರವೇಶ ಮತ್ತು ಜೈನಪ್ರಯೋಗ ಪ್ರವೇಶಿಕ ತರಗತಿಗಳ ಭಾಷಾ ವಿಷಯಕ್ಕೆ ಸಂಬಂಧಿಸಿದ 1ನೇ ಮತ್ತು 2ನೇ ಪತ್ರಿಕೆಗಳು 10ನೇ ತರಗತಿಯ ಪ್ರಸಕ್ತ ಶೈಕ್ಷಣಿಕ ವರ್ಷದ ಪ್ರಥಮ ಭಾಷೆ ಸಂಸ್ಕೃತ,–ಕನ್ನಡ ದ್ವಿತೀಯ ಭಾಷೆ ಆಂಗ್ಲ, ತೃತೀಯ ಭಾಷೆ ಹಿಂದಿ ವಿಷಯಗಳಿಗೆ ಅನುಗುಣವಾಗಿರುತ್ತದೆ.
15. ಸಂಸ್ಕೃತ ಸಾಹಿತ್ಯ, ವೇದಮೂಲ ಮತ್ತು ಜೈನಪ್ರಯೋಗ ಪ್ರವೀಣ ತರಗತಿಗಳ ಭಾಷಾ ವಿಷಯಕ್ಕೆ ಸಂಬಂಧಿಸಿದಂತೆ ದ್ವಿತೀಯ ಪಿ.ಯು.ಸಿಯ ಪತ್ರಿಕೆ 1 ಸಂಸ್ಕೃತ/ಕನ್ನಡ ಮತ್ತು 2ನೇ ಪತ್ರಿಕೆ ಇಂಗ್ಲೀಷ್/ಹಿಂದಿ ವಿಷಯಗಳಿಗೆ ಅನುಗುಣವಾಗಿರುತ್ತದೆ.
16. ವೇದ ಪ್ರಥಮಾ/ಜೈನಪ್ರಥಮಾ ವಿದ್ಯಾರ್ಥಿಗಳು **ಸಂಸ್ಕೃತ ಪ್ರಥಮಾ ದ್ವಿತೀಯ ಪತ್ರಿಕೆ**ಯನ್ನು; ವೇದ ಪ್ರವೇಶ/ಜೈನಪ್ರಯೋಗ ಪ್ರವೇಶಿಕ ವಿದ್ಯಾರ್ಥಿಗಳು **ಸಂಸ್ಕೃತ ಕಾವ್ಯ ನಾಲ್ಕನೇ ಪತ್ರಿಕೆ**ಯನ್ನು ಹಾಗೂ ವೇದಮೂಲ/ ಜೈನಪ್ರಯೋಗ ಪ್ರವೀಣ **ಸಾಹಿತ್ಯ ತರಗತಿಯ ವ್ಯಾಕರಣ ಪತ್ರಿಕೆ**ಯನ್ನು ಬರೆಯುವುದು ಕಡ್ಡಾಯ.
17. ಶಾಲಾ/ಕಾಲೇಜುಗಳ ಅನುದಾನಸಂಹಿತೆ ನಿಯಮದಂತೆ ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ, ವೇದ ಪ್ರಥಮಾ, ಪ್ರವೇಶ ಮೂಲ ಹಾಗೂ ಜೈನ ಪ್ರಯೋಗ ಪ್ರವೇಶಿಕಾ, ಜೈನ ಪ್ರವೀಣ ಪರೀಕ್ಷೆಗಳಿಗೆ ಕ್ರಮವಾಗಿ **ಕನಿಷ್ಠ 20, 15, 10 ವಿದ್ಯಾರ್ಥಿಗಳನ್ನು ಕೂರಿಸುವುದು ಕಡ್ಡಾಯವಾಗಿರುತ್ತದೆ.**
18. **ಸರ್ಕಾರದ ಆದೇಶ ಸಂಖ್ಯೆ: ಇಡಿ 295 ಯುಎನ್ಇ 2018, ದಿನಾಂಕ: 23/01/2019 ಹಾಗೂ ಪ್ರಶಾಸನ ಸಮಿತಿ (ಸಿಂಡಿಕೇಟ್) 51ನೇ ಸಭೆಯ ಅನುಮೋದನೆಯಂತೆ SC/ST & CAT-I ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ 50% ವಿನಾಯಿತಿ ನಿಗದಿಪಡಿಸಲಾಗಿದೆ. ವಿದ್ಯಾರ್ಥಿಗಳು ಜಾತಿ ಪ್ರಮಾಣಪತ್ರದ ನಕಲು ಪ್ರತಿಗಳನ್ನು ಸಲ್ಲಿಸದಿದ್ದರೆ, ಪರೀಕ್ಷಾ ಶುಲ್ಕದ ಪೂರ್ಣ ಹಣವನ್ನು ಶಾಲಾ/ಕಾಲೇಜು ಮುಖ್ಯಸ್ಥರೆ ಭರಿಸಬೇಕಾಗುತ್ತದೆ.**
19. **I. ಪರೀಕ್ಷಾ ಶುಲ್ಕ ವಿವರ**

| ವಿಷಯಗಳು | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ |
|---|---|---|---|
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ, ಜೈನಪ್ರಯೋಗ ಪ್ರಥಮಾ | **80.00** | **30.00** | **110.00** |
| ಸಂಸ್ಕೃತ ಕಾವ್ಯ, ವೇದ ಪ್ರವೇಶ, ಜೈನಪ್ರಯೋಗ ಪ್ರವೇಶಿಕಾ | **140.00** | **30.00** | **170.00** |
| ಸಂಸ್ಕೃತ ಸಾಹಿತ್ಯ, ವೇದ ಮೂಲ, ಜೈನಪ್ರಯೋಗ ಪ್ರವೀಣ | **320.00** | **30.00** | **350.00** |

**II. SC/ST & CAT-I ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿವರ**

| ವಿಷಯಗಳು | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ |
|---|---|---|---|
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ, ಜೈನಪ್ರಯೋಗ ಪ್ರಥಮಾ | **40.00** | **15.00** | **55.00** |
| ಸಂಸ್ಕೃತ ಕಾವ್ಯ, ವೇದ ಪ್ರವೇಶ, ಜೈನಪ್ರಯೋಗ ಪ್ರವೇಶಿಕಾ | **70.00** | **15.00** | **85.00** |
| ಸಂಸ್ಕೃತ ಸಾಹಿತ್ಯ, ವೇದ ಮೂಲ, ಜೈನಪ್ರಯೋಗ ಪ್ರವೀಣ | **160.00** | **15.00** | **175.00** |

20. **ಸಾಹಿತ್ಯ ಪರೀಕ್ಷೆಯ ಪುನರಾವರ್ತಿತ ಅಭ್ಯರ್ಥಿಗಳ ಅರ್ಜಿಯೊಂದಿಗೆ ನಿರ್ದೇಶನಾಲಯವು ನೀಡಿರುವ ಅಧಿಕೃತ ಅನುತ್ತೀರ್ಣ ಅಂಕಪಟ್ಟಿಯನ್ನು ಪೂರ್ಣ ಮಾಹಿತಿಗಳೊಂದಿಗೆ ಭಾವಚಿತ್ರಸಹಿತ ಸ್ಪಷ್ಟವಾಗಿ ನಮೂದಿಸಿ ದೃಢೀಕರಿಸಿ ಸಲ್ಲಿಸುವುದು.**
21. ಜೈನ ಪ್ರಯೋಗ ಪ್ರವೇಶಿಕಾ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು 8ನೇ ತರಗತಿ ಅಥವಾ ಸಂಸ್ಕೃತ ಪ್ರಥಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

22. ಜೈನ ಪ್ರಯೋಗ ಪ್ರವೀಣ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು 10ನೇ ತರಗತಿ ಅಥವಾ ಜೈನ ಪ್ರಯೋಗ ಪ್ರವೇಶಿಕಾ ಅಥವಾ ಜೈನ–ಆಗಮ ಪ್ರವೀಣ ಪರೀಕ್ಷೆ ಉತ್ತೀರ್ಣತೆ ಕಡ್ಡಾಯವಾಗಿರುತ್ತದೆ.

23. ಎಲ್ಲಾ ತರಗತಿಗಳ ಪ್ರಶ್ನೆಪತ್ರಿಕೆಗಳು ಪ್ರಸಕ್ತ ಶೈಕ್ಷಣಿಕ ವರ್ಷದ ಪಠ್ಯ ವಿಷಯಗಳಿಗೆ ಅನುಗುಣವಾಗಿರುತ್ತದೆ.

24. **ಖಾಸಗಿಯಾಗಿ ಸಂಸ್ಕೃತ, ವೇದ ಮತ್ತು ಜೈನ ತರಗತಿಗಳ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಯಾವುದೇ ವರ್ಗದ ಅಭ್ಯರ್ಥಿಗಳು ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸುವುದು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ರ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ 50% ವಿನಾಯಿತಿ ನಿಗದಿಪಡಿಸಲಾಗಿದೆ.**

25. **ಒಂದೇ ಬಾರಿಗೆ ಸಂಸ್ಕೃತ ಹಾಗೂ ವೇದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.**

26. **F-(ಶಾಲಾ ವಿದ್ಯಾರ್ಥಿಗಳು) R-(ಪುನರಾವರ್ತಿತ ವಿದ್ಯಾರ್ಥಿಗಳು) P-(ಖಾಸಗಿ ವಿದ್ಯಾರ್ಥಿಗಳು) ಪ್ರತ್ಯೇಕವಾಗಿ ಅರ್ಜಿಯಲ್ಲಿ ಗುರುತಿಸುವುದು.**

## ಖಾಸಗಿ ಅಭ್ಯರ್ಥಿಗಳ ಪ್ರವೇಶಾರ್ಹತೆಗಳು

### I. ಸಂಸ್ಕೃತ ಪ್ರಥಮಾ/ವೇದ ಪ್ರಥಮಾ

1. ಸಂಸ್ಕೃತ ಪ್ರಥಮಾ/ವೇದ ಪ್ರಥಮಾ/ಜೈನ ಪ್ರಯೋಗ ಪ್ರಥಮಾ ಅಭ್ಯರ್ಥಿಗಳಿಗೆ ದಿನಾಂಕ: 31.12.2022ಕ್ಕೆ 12 ವರ್ಷ ತುಂಬಿರಬೇಕು. ಜನ್ಮದಿನಾಂಕದ ದೃಢೀಕರಣ ಪತ್ರ ನೀಡುವುದು.
2. ಸಾಮಾನ್ಯ ಶಿಕ್ಷಣ 8ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವವರು/ಉತ್ತೀರ್ಣರಾದವರು.

### II. ಸಂಸ್ಕೃತ ಕಾವ್ಯ/ವೇದ ಪ್ರವೇಶ/ಜೈನಪ್ರಯೋಗ ಪ್ರವೇಶಿಕಾ

1. ಸಂಸ್ಕೃತ ಕಾವ್ಯ/ವೇದ ಪ್ರವೇಶ/ಜೈನ ಪ್ರಯೋಗ ಪ್ರವೇಶಿಕಾ ಅಭ್ಯರ್ಥಿಗಳಿಗೆ ದಿನಾಂಕ: 31.12.2022ಕ್ಕೆ 15 ವರ್ಷ ತುಂಬಿರಬೇಕು. ಜನ್ಮದಿನಾಂಕದ ದೃಢೀಕರಣ ಪತ್ರ ನೀಡುವುದು.
2. ಸಾಮಾನ್ಯ ಶಿಕ್ಷಣ 10ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವವರು/ಉತ್ತೀರ್ಣರಾದವರು ಅಥವಾ ಸಂಸ್ಕೃತ ಪ್ರಥಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಎರಡು ವರ್ಷ ತುಂಬಿರಬೇಕು.
3. ವೇದ ಪ್ರಥಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

### III. ಸಂಸ್ಕೃತ ಸಾಹಿತ್ಯ/ವೇದ ಮೂಲ/ಜೈನಪ್ರಯೋಗ ಪ್ರವೀಣ

1. ಸಂಸ್ಕೃತ ಸಾಹಿತ್ಯ/ವೇದ ಮೂಲ/ಜೈನಪ್ರಯೋಗ ಪ್ರವೀಣ ಪರೀಕ್ಷಾ ಅಭ್ಯರ್ಥಿಗಳಿಗೆ ದಿನಾಂಕ: 31.12.2022ಕ್ಕೆ 17 ವರ್ಷ ತುಂಬಿರಬೇಕು. ಜನ್ಮದಿನಾಂಕ ಪತ್ರ ನೀಡುವುದು.
2. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಸಂಸ್ಕೃತವನ್ನು ಪ್ರಥಮ, ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಅಧ್ಯಯನ ಮಾಡಿರಬೇಕು. ಕಡ್ಡಾಯವಾಗಿ ಶಾಲಾಹಂತದಲ್ಲಿಯೇ ಪರೀಕ್ಷೆ ನಡೆಸಿ, ಪರೀಕ್ಷೆ ನಡೆಸಿರುವ ಬಗ್ಗೆ ಮಾಹಿತಿಯ ಒಂದು ಪ್ರತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.
3. ಸಂಸ್ಕೃತ ಕಾವ್ಯ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಎರಡು ವರ್ಷಗಳಾಗಿರಬೇಕು.
4. ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆ ನಡೆಸುವ ಆಗಮ ಪ್ರವರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಎರಡು ವರ್ಷ ಪೂರ್ಣಗೊಳಿಸಿರಬೇಕು.
5. ವೇದ ಪ್ರವೇಶ ಪರೀಕ್ಷೆ ಉತ್ತೀರ್ಣರಾಗಿ ಎರಡು ವರ್ಷ ಪೂರ್ಣಗೊಳಿಸಿರಬೇಕು.

## ಖಾಸಗಿ ಅಭ್ಯರ್ಥಿಗಳ ಪರೀಕ್ಷಾ ಶುಲ್ಕ ವಿವರ

| ವಿಷಯಗಳು | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ನೋಂದಣಿ ಶುಲ್ಕ | ಒಟ್ಟು ಮೊತ್ತ |
|---|---|---|---|---|
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ, ಜೈನ ಪ್ರಯೋಗ ಪ್ರಥಮಾ | **100.00** | **40.00** | **100.00** | **240.00** |
| ಸಂಸ್ಕೃತ ಕಾವ್ಯ,ವೇದ ಪ್ರವೇಶ, ಜೈನ ಪ್ರಯೋಗ ಪ್ರವೇಶಿಕಾ | **160.00** | **40.00** | **200.00** | **400.00** |

| | | | | |
|---|---|---|---|---|
| ಸಂಸ್ಕೃತ ಸಾಹಿತ್ಯ, ವೇದ ಮೂಲ, ಜೈನ ಪ್ರಯೋಗ ಪ್ರವೀಣ | **220.00** | **40.00** | **300.00** | **560.00** |

**ಖಾಸಗಿ ಅಭ್ಯರ್ಥಿಗಳ ಪರೀಕ್ಷಾ ಶುಲ್ಕ ವಿವರ (SC/ST & CAT-I) ವಿದ್ಯಾರ್ಥಿಗಳಿಗೆ ಮಾತ್ರ**

| ವಿಷಯಗಳು | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ನೋಂದಣಿ ಶುಲ್ಕ | ಒಟ್ಟು ಮೊತ್ತ |
|---|---|---|---|---|
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ, ಜೈನ ಪ್ರಯೋಗ ಪ್ರಥಮಾ | **50.00** | **20.00** | **50.00** | **120.00** |
| ಸಂಸ್ಕೃತ ಕಾವ್ಯ,ವೇದ ಪ್ರವೇಶ, ಜೈನ ಪ್ರಯೋಗ ಪ್ರವೇಶಿಕಾ | **80.00** | **20.00** | **100.00** | **200.00** |
| ಸಂಸ್ಕೃತ ಸಾಹಿತ್ಯ, ವೇದ ಮೂಲ, ಜೈನ ಪ್ರಯೋಗ ಪ್ರವೀಣ | **110.00** | **20.00** | **150.00** | **280.00** |

**ವಿ.ಸೂಚನೆ: ಮೇಲ್ಕಂಡ ಎಲ್ಲಾ ಪರೀಕ್ಷೆಗಳು ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿರ್ದೇಶನದಂತೆ ನಡೆಯುತ್ತವೆ.**

**ಲಗತ್ತಿಸಬೇಕಾದ ಅಡಕಗಳು:**

1. 'SBI COLLECT LINK'ನಲ್ಲಿ ಪರೀಕ್ಷಾ ಶುಲ್ಕವನ್ನು ಪಾವತಿಸಿದ ರಶೀದಿ
2. ವಿದ್ಯಾರ್ಥಿಗಳ ನಾಮಾಂಕಿತ ಪಟ್ಟಿ (N.R.)
3. ಅನುಬಂಧ–1 ಮತ್ತು 2 (ಪಥಮಾ, ಕಾವ್ಯ, ಸಾಹಿತ್ಯ ಹಾಗೂ ವೇದ ತರಗತಿಗಳಿಗೆ)
4. ಅರ್ಜಿಗಳೊಂದಿಗೆ ಜಾತಿ ಪ್ರಮಾಣಪತ್ರದ ನಕಲುಪ್ರತಿ (ಅನ್ವಯಿಸಿದವರಿಗೆ ಮಾತ್ರ)
5. ಮಾನ್ಯತೆ ಪ್ರಮಾಣಪತ್ರದ ನಕಲುಪ್ರತಿಯನ್ನು ಕಡ್ಡಾಯವಾಗಿ ಲತ್ತಿಸುವುದು. ಇಲ್ಲವಾದಲ್ಲಿ ಪರೀಕ್ಷೆಗೆ ಅವಕಾಶವಿಲ್ಲ.

**ಸಹಿ/–**
**ನಿರ್ದೇಶಕರು**
ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ
ಬೆಂಗಳೂರು

ಇವರಿಗೆ,
**ಮುಖ್ಯಶಿಕ್ಷಕರು, ರಾಜ್ಯದ ಎಲ್ಲಾ ಸಂಸ್ಕೃತ ಪಾಠಶಾಲೆಗಳು**

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
2. ಮಾನ್ಯ ಕುಲಸಚಿವರ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
3. ನೋಡಲ್ ಅಧಿಕಾರಿಗಳು, ಐ.ಸಿ.ಟಿ. ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಜಾಲತಾಣದಲ್ಲಿ ಪ್ರಕಟಿಸಲು
4. ಅಧ್ಯಕ್ಷರು, ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘ, ಬೆಂಗಳೂರು–560096
5. ಕಛೇರಿ ಪ್ರತಿ.